ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ ಮೂರು ದಿವಸಗಳಿಂದ ನನ್ನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಸರ್ಕಾರದವರು ಉತ್ತರ ಕೊಡುತ್ತಾರೋ ಇಲ್ಲವೋ ಎಂದು ಕೇಳುತ್ತೇನೆ.

(ಗೊಂದಲ)

ಅಕ್ರಮ ಕಲ್ಲು ಗಣಿ ವ್ಯವಹಾರ

೩೦೭(೩೫೭) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ರಾಜ್ಯದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಅಂದರೆ ಯಲಬುರ್ಗ, ಹುನಗುಂದ, ತಕ್ಕಲಕೋಟೆ, ಕೊಪ್ಪಳ ಇತ್ಯಾದಿಗಳಲ್ಲಿ ಕೆಲವರು ರೈತರಿಂದ ನೇರವಾಗಿ ಜಮೀನನ್ನು ಖರೀದಿಸಿಯೋ, ಅಥವಾ ಗುತ್ತಿಗೆ ಹಿಡಿದೋ ಅಕ್ರಮವಾಗಿ ಕಲ್ಲು–ಗಣಿ ವ್ಯವಹಾರ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನಿಯಂತ್ರಿಸಲು ಕೈಗೊಂಡ ಕ್ರಮಗಳೇನು ?

ಇ) ಗ್ರಾಮಾಂತರ ಪ್ರದೇಶದಲ್ಲಿಯ ಕಲ್ಲು– ಗುತ್ತಿಗೆಯ ವ್ಯವಹಾರವನ್ನು ಆಯಾ ಮಂಡಳದ ಕಕ್ಷೆಗೆ ಒಳಪಡಿಸುವ ವಿಚಾರ ಏನಾದರೂ ಸರ್ಕಾರದವರ ಮುಂದಿದೆಯೇ ?

ಶ್ರೀ ರವೀಶ್ ಪಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಉಚ್ಚ ನ್ಯಾಯಾಲಯದ ದಿನಾಂಕ ೧೪–೭–೮೭ ರ ತೀರ್ಪಿನ ಪ್ರಕಾರ ಹಳೆ ಮೈಸೂರು ಸಂಸ್ಥಾನದ ೯ ಜಿಲ್ಲೆಗಳು ಮತ್ತು ಬಳ್ಳಾರಿ, ಕೊಳ್ಳೇಗಾಲ ದಕ್ಷಿಣ ಕನ್ನಡ ಈ ಜಿಲ್ಲೆಗಳಲ್ಲಿ ಪಟ್ಟಾ ಜಮೀನಿನಲ್ಲಿರುವ ಖನಿಜ ಸಂಪತ್ತನ್ನು ತೆಗೆಯುವ ಬಗ್ಗೆ ಯಾವುದೇ ಇಲಾಖೆಯ ಅಧಿಕಾರಿಗಳು ಅಡಚಣೆ ಮಾಡಬಾರದೆಂದು ತಿಳಿಸಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಮನಕ್ಕೆ ಬಂದ ಅಕ್ರಮ ಗಣಿಗಾರಿಕೆ ಬಗ್ಗೆ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ ಮತ್ತು ನ್ಯಾಯಾಲಯಗಳಲ್ಲಿ ಎಫ್. ಐ. ಆರ್. ಸಲ್ಲಿಸಲಾಗಿದೆ. ಕಾನೂನು ರೀತಿ ಮಂಜೂರು ಮಾಡಿರುವ ಗಣಿ ಗುತ್ತಿಗೆ ಬಿಟ್ಟು ಪಟ್ಟಾ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರೆ ಅಂತಹವರ ಮೇಲೆ ಕಂದಾಯ ಇಲಾಖೆಯು ಕ್ರಮ ತೆಗೆದುಕೊಂಡಿರುತ್ತದೆ ಎಂದು ತಿಳಿದು ಬಂದಿದೆ.

ಇ) ಇಲ್ಲ.

ಕಂಬಾರ ಕೈಗಾರಿಕೆಯ ಸಂಘ ಸಂಸ್ಥೆಗಳ ಬಗ್ಗೆ

೩೦೯(೮೯) ಶ್ರೀ ಚಂದ್ರಕಾಂತ ಸಿ. ಬೆಲ್ಲಾದ್ (ಧಾರವಾಡ ಶಹರ).—ಸಣ್ಣ ಪ್ರಮಾಣದ ಕೈಗಾರಿಕಾ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ಕರ್ನಾಟಕ ರಾಜ್ಯದಲ್ಲಿ ಕಂಬಾರ ಕೈಗಾರಿಕೆಯ ಸಂಘ ಸಂಸ್ಥೆಗಳು ಎಷ್ಟು ನೋಂದಾಯಿಸಿರುತ್ತವೆ. ಅವುಗಳಲ್ಲಿ ಗುಡಿ ಕೈಗಾರಿಕೆಗಳಾಗಿ ಖಾದಿ ಗ್ರಾಮೋದ್ಯೋಗ ಮಂಡಲಿಯಿಂದ ಧನಸಹಾಯದ ಮೇಲೆ ನಡೆಯುತ್ತಿರುವ ಸಂಘಗಳೆಷ್ಟು? (ಪ್ರತ್ಯೇಕವಾಗಿ ೩ ವರ್ಷ ೧೯೮೨–೮೫ರ ವರೆಗೆ ಕೊಡುವುದು)

ಆ) ಕಂಬಾರ ಕೈಗಾರಿಕೆಗಳಿಗೆ ವೈಯಕ್ತಿಕ ಹಾಗೂ ಸಂಘ ಸಂಸ್ಥೆಗಳಿಗೆ ಕೈಗಾರಿಕೆಯ ಮೂಲ ವಸ್ತುಗಳಾದ ಪುಣ್ಣು ಹಾಗೂ ಉರಪಲು ಕಟ್ಟಿಗೆ ಪೂರೈಕೆಯ ಪ್ರಮಾಣವನ್ನು ಕಳೆದ ೩ ವರ್ಷಗಳ ವಿವರ ಒದಗಿಸುವುದು ?